## ಹೆಲ್ಪೇಜ್ ಎಸ್‌ಒಎಸ್




ಅಶಕ್ತ ಹಿರಿಯ ನಾಗರಿಕರ ನೆರವಿಗಾಗಿ ದುಡಿಯುತ್ತಿರುವ ಸ್ವಯಂ ಸೇವಾ ಸಂಸ್ಥೆ ಹೆಲ್ಪ್ ಏಜ್ ಇಂಡಿಯ ಆ್ಯಂಡ್ರಾಯ್ಡ್‌ನ ಈ ಆ್ಯಪ್ ಬಿಡುಗಡೆ ಮಾಡಿದೆ. 'ಸೇವ್ ಅವರ್ ಸೀನಿಯರ್ಸ್' ಎಂಬ ಈ ಆ್ಯಪ್ ಗೂಗ್ಲ್ ಪ್ಲೇ ಸ್ಟೋರ್‌ನಲ್ಲಿ ಲಭ್ಯ. ಇದು ಮುಖ್ಯವಾದ ಮೂರು ಬಟನ್‌ಗಳನ್ನು ಹೊಂದಿದ್ದು, ಎಸ್‌ಒಎಸ್ ಬಟನ್ ಒತ್ತಿದರೆ ಹಿರಿಯ ನಾಗರಿಕರಿರುವ ಪ್ರದೇಶದ ವಿವರ ಜಿಪಿಎಸ್ ವ್ಯವಸ್ಥೆ ಮೂಲಕ ಸಮೀಪದ ಹೆಲ್ಪ್ ಏಜ್ ಕಚೇರಿಯ ಹೆಲ್ಪ್‌ಲೈನ್ ತಲುಪುತ್ತದೆ. ಸಂಸ್ಥೆಯವರು ತುರ್ತು ಅವಶ್ಯಕತೆಯಿದ್ದರೆ ಸಮೀಪದ ಪೊಲೀಸ್ ಠಾಣೆ ಅಥವಾ ಆಸ್ಪತ್ರೆ ಅಥವಾ ವೃದ್ಧಾಶ್ರಮ ಸಂಪರ್ಕಿಸಿ ನೆರವು ಒದಗಿಸುತ್ತಾರೆ. ಇನ್ನೊಂದು ಬಟನ್ ಒತ್ತಿದರೆ, ಆರೋಗ್ಯದ ಬಗ್ಗೆ ಮಾಹಿತಿ, ಹಿರಿಯ ನಾಗರಿಕರ ಹಣಕಾಸು ಯೋಜನೆ, ವಿಲ್ ಬರೆಯುವುದರ ಬಗ್ಗೆ ವಿವರಗಳನ್ನು ಒದಗಿಸುತ್ತದೆ. ಇನ್ನೊಂದು ಹಿರಿಯ ನಾಗರಿಕರಿಗೆ ಇರುವ ರಿಯಾಯ್ತಿ ಅನುಕೂಲಗಳನ್ನು ತಿಳಿಸುತ್ತದೆ. ಒಮ್ಮೆ ಆ್ಯಪ್ ಡೌನ್‌ಲೋಡ್ ಮಾಡಿದರೆ ಸಾಕು, ನಂತರ ಅಂತರ್ಜಾಲದ ನೆರವಿಲ್ಲದೇ ಬಳಸಬಹುದು.




## ರೊಬೋಮೇಟ್ ಪ್ಲಸ್

ಮಹೇಶ್ ಟ್ಯುಟೋರಿಯಲ್ಸ್ ಎಜುಕೇರ್ ಈ ಆನ್‌ಲೈನ್ ಶೈಕ್ಷಣಿಕ ಆ್ಯಪ್ ಬಿಡುಗಡೆ ಮಾಡಿದ್ದು, ವಿದ್ಯಾರ್ಥಿಗಳಿಗೆ ಕಲಿಕಾ ಪ್ರಕ್ರಿಯೆಯನ್ನು ಸುಲಭವಾಗುವಂತೆ ಮಾಡಿದೆ. ಇದು ಕಲಿಕಾ ಟಿಪ್ಪಣಿ, ಪರೀಕ್ಷಾ ಪ್ರಶ್ನೆ ಪತ್ರಿಕೆಗಳು, ಅನಿಮೇಶನ್ ಹಾಗೂ ರೆಕಾರ್ಡ್ ಆದ ಪಾಠಗಳನ್ನು ಒಳಗೊಂಡಿರುವ ಆ್ಯಂಡ್ರಾಯ್ಡ್ ಆ್ಯಪ್. ವಿಡಿಯೋ ಮೂಲಕ ಚ್ಯಾಟ್ ಮಾಡಬಹುದು. ಜೆಇಇ ಮೇನ್, ಜೆಇಇ ಅಡ್ವಾನ್ಸ್ಡ್, ಸಿಎ ಸಿಪಿಟಿ, ಎಂಬಿಎ, ಕ್ಯಾಟ್, ಸಿಇಟಿ, ಎಸ್‌ಎಸ್‌ಸಿ, ಎಚ್‌ಎಸ್‌ಸಿ ಮೊದಲಾದ ಪರೀಕ್ಷೆಗಳ ತಯಾರಿ ಮಾಡುವ ವಿದ್ಯಾರ್ಥಿಗಳಿಗೆ ಅನುಕೂಲ. ಆದರೆ ವೈಫೈ ಹಾಗೂ 3ಜಿ ಸಂಪರ್ಕ ಇರಬೇಕು.

## ಸೋಲಾರ್ ವಾಕ್ 2

ಐಪ್ಯಾಡ್‌ನ ಈ ಆ್ಯಪ್ ಖಗೋಳ ವಿಜ್ಞಾನದ ಮಾಹಿತಿ ನೀಡುವ ಆ್ಯಪ್ ಆಗಿದ್ದು, ನಮ್ಮ ಸೌರವ್ಯೂಹದ ಬಗ್ಗೆ ಹೆಚ್ಚಿನ ವಿವರಗಳನ್ನು ಪಡೆಯಬಹುದು. ಸೌರವ್ಯೂಹದಲ್ಲಿರುವ ಆಕಾಶ ಕಾಯಗಳ ಅತ್ಯುತ್ತಮ 3ಡಿ ಚಿತ್ರಗಳು ಲಭ್ಯ. ಪ್ರತಿಯೊಂದು ವಸ್ತುವಿನ ಬಗ್ಗೆ ಗ್ರಾಫಿಕ್ ಸಹಿತ ವಿವರಿಸಲಾಗಿದ್ದು, ಚಿತ್ರದ ಗ್ಯಾಲರಿಗಳು ಅಂದವಾಗಿವೆ. ಧೂಮಕೇತು, ಕ್ಷುದ್ರಗ್ರಹಗಳು, ಕುಬ್ಜಗ್ರಹಗಳ ಬಗ್ಗೆ ಅರಿಯಬೇಕಾದರೆ ಶುಲ್ಕ ನೀಡಬೇಕಾಗುತ್ತದೆ. ಈ ಆ್ಯಪ್ ತೆರೆದಾಗ ನಮ್ಮ ಸೌರವ್ಯೂಹದ ವಿಸ್ತಾರವಾದ ಚಿತ್ರ ಗೋಚರಿಸುತ್ತದೆ. ಸೂರ್ಯನ ಚಿತ್ರ ದೊಡ್ಡದಾಗಿ ಅದರ ಸುತ್ತ ಇರುವ ಪ್ರಭಾವಲಯ ಸ್ಪಷ್ಟವಾಗಿ ಕಾಣುತ್ತದೆ. ಪರದೆಯ ಮೇಲ್ಗಡೆ ಬಾರ್ ಇದ್ದು ಮಧ್ಯದಲ್ಲಿ ಸದ್ಯ ನೀವು ನೋಡುತ್ತಿರುವ ಆಕಾಶ ಕಾಯದ ಹೆಸರಿರುತ್ತದೆ. ಮಾಹಿತಿಯ ಐಕಾನ್ ಮೇಲೆ ಕುಟ್ಟಿದರೆ ಸಂಪೂರ್ಣ ಮಾಹಿತಿ ಸಿಗುವುದಲ್ಲದೇ ಗ್ರಾಫ್ ಮೂಲಕ ಸೂರ್ಯ ಹಾಗೂ ಭೂಮಿಯ ನಡುವಿನ ದೂರ ಮೊದಲಾದವುಗಳ ವಿವರ ಸಿಗುತ್ತದೆ.






## ಗೂಗ್ಲ್ ಜಿಬೋರ್ಡ್

ಐಫೋನ್‌ನ ಈ ಕೀಬೋರ್ಡ್‌ನಲ್ಲಿ ಇಮೋಜಿ, ಜಿಫ್ ಹುಡುಕಾಟಗಳು ಕೂಡಾ ಲಭ್ಯ. 56 ಸೆಕೆಂಡುಗಳಲ್ಲೇ ಐಫೋನ್ ಆ್ಯಪ್ ಸ್ಟೋರ್‌ನಿಂದ ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಸೆಟಪ್ ಮಾಡಿದ ಮೇಲೆ ಬ್ಲಾಕ್ ಒಫೆನ್ಸಿವ್ ವರ್ಡ್ಸ್ ಆಯ್ಕೆಯನ್ನು ಬಂದ್ ಮಾಡಿಕೊಳ್ಳಿ. ಗ್ಲೋಬ್ ಐಕಾನ್ ಮೇಲೆ ಕುಟ್ಟ ಬೇಕಾದ ಆಯ್ಕೆಗಳನ್ನು ಮಾಡಿಕೊಳ್ಳಿ. ಇಮೋಜಿಗಳನ್ನು ಸುಲಭವಾಗಿ ಬಳಸಬಹುದು.

■ ಎಸ್. ತುಂಬೆ